# ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 220ಅಮುಕಾ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ: 31.7.2021

## ಪರಿಷ್ಕೃತ ಸುತ್ತೋಲೆ

ವಿಷಯ: ಕೇರಳ ಹಾಗೂ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಆಗಮಿಸುವ ಪ್ರಯಾಣಿಕರಿಗೆ ವಿಶೇಷ ಸರ್ವೇಕ್ಷಣಾ ಚಟುವಟಿಕೆಗಳು.

ಉಲ್ಲೇಖ: (1) ಕೋವಿಡ್ 19 ರಾಜ್ಯ ತಾಂತ್ರಿಕ ಸಲಹಾ ಸಮಿತಿಯ 112ನೇ ಸಭೆಯ ನಡಾವಳಿಗಳು,ದಿನಾಂಕ: 20.6.2021.

(2) ಆದೇಶ ಸಂಖ್ಯೆ: ಆರ್ ಡಿ 158 ಟಿ ಎನ್ ಆರ್ 2020, ದಿನಾಂಕ: 28.6.2021 ಹಾಗೂ 01.07.2021

(3) ಕೋವಿಡ್ 19 ರಾಜ್ಯ ತಾಂತ್ರಿಕ ಸಲಹಾ ಸಮಿತಿಯ 116ನೇ ಸಭೆಯ ನಡಾವಳಿಗಳು,ದಿನಾಂಕ: 24.7.2021.

ಪ್ರಸ್ತುತ, ನೆರೆಯ ಕೇರಳ ಹಾಗೂ ಮಹಾರಾಷ್ಟ್ರದಲ್ಲಿನ ಕೋವಿಡ್ 19 ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಸದರಿ ರಾಜ್ಯಗಳಿಂದ ಕರ್ನಾಟಕಕ್ಕೆ ಆಗಮಿಸುವ ಪ್ರಯಾಣಿಕರ ಸಂಬಂಧ ಈ ಕೆಳಕಂಡ ವಿಶೇಷ ಸರ್ವೇಕ್ಷಣಾ ಚಟುವಟಿಕೆಗಳನ್ನು ಕಡ್ಡಾಯವಾಗಿ ಕೈಗೊಳ್ಳಲು ಸೂಚಿಸಿದೆ.

(i) ಕೇರಳ ಹಾಗೂ ಮಹಾರಾಷ್ಟ್ರದಿಂದ ಬರುವವರು, **ಕೋವಿಡ್ 19 ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದಿದ್ದರೂ / ಪಡೆಯದಿದ್ದರೂ ಸಹ 72 ಗಂಟೆಗಳ ಒಳಗೆ ಮಾಡಿಸಿರುವ ಆರ್ ಟಿ – ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ಹೊಂದುವುದು ಕಡ್ಡಾಯವಾಗಿರುತ್ತದೆ**.

(ii) ವಿಮಾನ, ರೈಲು, ರಸ್ತೆ ( ಬಸ್ ಹಾಗೂ ಇತರ ಸ್ವಂತ ವಾಹನಗಳ ಮುಖಾಂತರ) ಮಾರ್ಗದಲ್ಲಿ ಕರ್ನಾಟಕಕ್ಕೆ ಆಗಮಿಸುವ ಪ್ರಯಾಣಿಕರಿಗೆ ಮೇಲಿನ ನಿಯಮದ ಪಾಲನೆಯು ಕಡ್ಡಾಯವಾಗಿರುತ್ತದೆ. ಹಾಗೂ ಕೇರಳ ಮತ್ತು ಮಹಾರಾಷ್ಟ್ರದಿಂದ ಹೊರಡುವ ಎಲ್ಲಾ ವಿಮಾನಗಳಿಗೂ ಅನ್ವಯವಾಗುತ್ತದೆ.

(iii) ಅದರಂತೆ, 72 ಗಂಟೆಗಳ ಒಳಗೆ ಮಾಡಿಸಿದ, ಆರ್ ಟಿ – ಪಿಸಿಆರ್ ನೆಗೆಟಿವ್ ಟೆಸ್ಟ್ ವರದಿಯನ್ನು ಹೊಂದಿರುವ ಪ್ರಯಾಣಿಕರಿಗೆ ಮಾತ್ರವೇ ಸಂಬಂಧಪಟ್ಟ ವಿಮಾನಯಾನ ಸಂಸ್ಥೆಯವರು ಬೋರ್ಡಿಂಗ್ ಪಾಸ್ ನೀಡುವುದು.

(iv) ರೈಲಿನಲ್ಲಿ ಪ್ರಯಾಣಿಸುವ ಎಲ್ಲಾ ಪ್ರಯಾಣಿಕರು ಆರ್ ಟಿ – ಪಿಸಿಆರ್ ನೆಗೆಟಿವ್ ಟೆಸ್ಟ್ ವರದಿಯನ್ನು ಹೊಂದುವುದನ್ನು ಖಚಿತಪಡಿಸಿಕೊಳ್ಳುವುದು ರೈಲ್ವೆ ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.

(v) ಬಸ್‌ನ ಮೂಲಕ ಪ್ರಯಾಣಿಸುವವರು ಆರ್ ಟಿ – ಪಿಸಿಆರ್ ನೆಗೆಟಿವ್ ಟೆಸ್ಟ್ ವರದಿಯನ್ನು ಹೊಂದುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯು ಆಯಾ ಬಸ್ ನಿರ್ವಾಹಕರ (bus conductor) ದ್ದಾಗಿದೆ.

(vi) ಕೇರಳದಿಂದ ಕರ್ನಾಟಕಕ್ಕೆ ವಿದ್ಯಾಭ್ಯಾಸ, ಕಛೇರಿ ಕೆಲಸ, ವ್ಯಾಪಾರ – ವ್ಯವಹಾರ ಸೇರಿದಂತೆ, ಇತರ ಕಾರಣಗಳಿಗೆ ದೈನಂದಿನವಾಗಿ ಭೇಟಿ ನೀಡುವವರು ಪ್ರತಿ 15 ದಿನಗಳಿಗೊಮ್ಮೆ ಆರ್‌ಟಿ –

ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡು, ನೆಗೆಟಿವ್ ವರದಿಯನ್ನು ಹೊಂದುವುದು ಕಡ್ಡಾಯವಾಗಿರುತ್ತದೆ.

(vii) ಕೇರಳಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು & ಮೈಸೂರು ಹಾಗೂ ಮಹಾರಾಷ್ಟ್ರದ ಗಡಿ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ,ಕಲಬುರಗಿ ಮತ್ತು ಬೀದರ್ ಮೂಲಕ ರಾಜ್ಯಕ್ಕೆ ಪ್ರವೇಶಿಸುವ ವಾಹನಗಳಿಗೆ (ಚಾಲಕರು/ ಸಹಾಯಕರು/ಪ್ರಯಾಣಿಕರು) ಮೇಲೆ ತಿಳಿಸಿರುವ ನಿಯಮಗಳ ಅನುಪಾಲನೆಗೆ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸುವುದು ಹಾಗೂ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ದಾರಿಯು ಆಯಾ ಜಿಲ್ಲಾಧಿಕಾರಿಗಳದ್ದಾಗಿರುತ್ತದೆ.

ಮುಂದುವರೆದು, ಈ ಕೆಳಕಂಡ ಪ್ರಕರಣಗಳಿಗೆ / ಸಂದರ್ಭಗಳಲ್ಲಿ ಆರ್‌ಟಿ –ಪಿಸಿಆರ್ ನೆಗೆಟಿವ್ ಟೆಸ್ಟ್ ವರದಿ ಹೊಂದುವುದರಿಂದ ವಿನಾಯಿತಿ ನೀಡಲಾಗಿದೆ.

(i) ಸಾಂವಿಧಾನಿಕ ಕಾರ್ಯಕಾರಿಗಳು ( Constitutional functionaries ) ಮತ್ತು ವೈದ್ಯ / ವೈದ್ಯಕೀಯ ಸಿಬ್ಬಂದಿಗಳು

(ii) ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು

(iii) ಕೇರಳದಿಂದ ತುರ್ತು ಸಂದರ್ಭಗಳಲ್ಲಿ ( ಕುಟುಂಬದಲ್ಲಿ ಮರಣ ಸಂಭವಿಸಿದ ಪಕ್ಷದಲ್ಲಿ, ವೈದ್ಯಕೀಯ ಚಿಕಿತ್ಸೆ, ಇತ್ಯಾದಿ) ಕರ್ನಾಟಕಕ್ಕೆ ಆಗಮಿಸುವ ಪ್ರಯಾಣಿಕರ ಮಾದರಿಗಳನ್ನು ಪರೀಕ್ಷೆಗಾಗಿ ಕರ್ನಾಟಕದಲ್ಲಿಯೇ ಸಂಗ್ರಹಿಸಲಾಗುವುದು. ಸದರಿ ಪ್ರಯಾಣಿಕರ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ, ಇತ್ಯಾದಿ ಪೂರ್ಣ ವಿವರಗಳನ್ನು ಗುರುತಿನ ಚೀಟಿಯ ಆಧಾರದ ಅನ್ವಯ ಪಡೆಯುವುದು. ಆರ್ ಟಿ –ಪಿಸಿ ಆರ್ ಪರೀಕ್ಷೆಯ ವರದಿಯ ಆಧಾರದ ಮೇಲೆ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಶಿಷ್ಟಾಚಾರದಂತೆ ಕ್ರಮ ಕೈಗೊಳ್ಳುವುದು.

27/2/21

(ಜಾವೇದ್ ಅಖ್ತರ್)
ಅಪರ ಮುಖ್ಯ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಪ್ರತಿಯನ್ನು,**

1. ಎಲ್ಲಾ ವಿಮಾನಯಾನ ಸಂಸ್ಥೆಗಳ ಕಾರ್ಯಕಾರಿ ಅಧಿಕಾರಿಗಳು
2. ವ್ಯವಸ್ಥಾಪಕ ನಿರ್ದೇಶಕರು– ಬಿ ಐ ಎ ಎಲ್ , ಬೆಂಗಳೂರು, ಇವರಿಗೆ ಚಟುವಟಿಕೆಯ ಸಮನ್ವಯ ಸಾಧಿಸಲು.
3. ವಿಮಾನ ನಿಲ್ದಾಣ ಆರೋಗ್ಯ ಪ್ರಾಧಿಕಾರ, ಬಿ ಐ ಎ ಎಲ್, ಬೆಂಗಳೂರು ಹಾಗೂ ಮಂಗಳೂರು ವಿಮಾನ ನಿಲ್ದಾಣ.
4. ವ್ಯವಸ್ಥಾಪಕರು, ಏರ್ ಪೋರ್ಟ್ ಅಥಾರಿಟಿ ಆಫ್ ಇಂಡಿಯಾ, ಹುಬ್ಬಳ್ಳಿ, ಬೆಳಗಾವಿ, ಕಲಬುರಗಿ ಹಾಗೂ ಮೈಸೂರು.
5. ವಿಶೇಷ ಆಯುಕ್ತರು – ಆರೋಗ್ಯ, ಬಿ ಬಿ ಎಂ ಪಿ, ಬೆಂಗಳೂರು.
6. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು , ಜಿಲ್ಲಾ ಪಂಚಾಯತ್ – ಎಲ್ಲಾ ಜಿಲ್ಲೆಗಳು
8. ಜಿಲ್ಲಾ ಆರೋಗ್ಯಾಧಿಕಾರಿಗಳು – ಎಲ್ಲಾ ಜಿಲ್ಲೆಗಳು
9. ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿಗಳು – ಎಲ್ಲಾ ಜಿಲ್ಲೆಗಳು

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2. ಸನ್ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು
3. ಅಪರ ಮುಖ್ಯ ಕಾರ್ಯದರ್ಶಿಗಳು,ಗೃಹ ಇಲಾಖೆ.
4. ಮುಖ್ಯ ಆಯುಕ್ತರು – ಬಿ ಬಿ ಎಂ ಪಿ, ಬೆಂಗಳೂರು.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
6. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
7. ಅಭಿಯಾನ ನಿರ್ದೇಶಕರು – ರಾಷ್ಟ್ರೀಯ ಆರೋಗ್ಯ ಅಭಿಯಾನ
8. ಶ್ರೀಮತಿ. ಶಿಖಾ , ಐ ಎಸ್ ಎಸ್, ವ್ಯವಸ್ಥಾಪಕ ನಿರ್ದೇಶಕರು, ಬಿ ಎಂ ಟಿ ಸಿ, ಬೆಂಗಳೂರು.
ಸಮನ್ವಯಾಧಿಕಾರಿಗಳು – ಡೊಮೆಸ್ಟಿಕ್ ಹಾಗೂ ಅಂತರರಾಷ್ಟ್ರೀಯ ಪ್ರಯಾಣಿಕರು, ಬಿ ಐ ಎ ಎಲ್, ಬೆಂಗಳೂರು.
9. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**GOVERNMENT OF KARNATAKA**

No: HFW 220 ACS 2021

Karnataka Government Secretariat
Vikasa Soudha
Bengaluru, Dated:31.7.2021

**REVISED CIRCULAR**

Subject: Special surveillance measures for arrivals from Kerala & Maharashtra - Regarding.

Reference : (1) Proceedings of 112th meeting of State COVID 19 TAC, Dated: 20.6.2021.
(2) Order No: RD 158 TNR 2020, Dated: 28.6.2021 & 01.07.2021
(3) Proceedings of 116th meeting of State COVID 19 TAC, Dated: 24.7.2021.

*********

In view of the current COVID 19 situation, the following revised special surveillance measures are notified herewith to be complied strictly for arrivals from Kerala & Maharashtra .

**(i)** Persons arriving from Kerala & Maharashtra , **should produce a negative RT – PCR certificate , that is not older than 72 hours irrespective of vaccination status.**

(ii) The above condition is mandatory for all the passengers coming to Karnataka by flight, bus, train and personal transport. This is applicable for all the flights originating from Kerala & Maharashtra .

(iii) Airlines shall issue boarding passes only to the passengers carrying RT-PCR negative certificate not older than 72 hours.

(iv) Railway Authorities shall be responsible for ensuring that all passengers travelling by trains carry negative RT-PCR certificates.

(v) For all the passengers travelling by bus, the bus conductor shall ensure that they possess RT-PCR negative certificates.

(vi) Deputy Commissioners of the Districts bordering Kerala i.e., Dakshina Kannada, Kodagu & Mysore and Maharashtra i.e., Belagavi , Vijayapura, Kalburgi and Bidar shall establish check posts & make arrangements to deploy necessary staff to ensure that all the vehicles ( driver, passengers, helper / cleaner) entering Karnataka are checked for the compliance of the above requirement.

(vii) Its mandatory for students & public visiting Karnataka daily for education, business & other reasons, to undergo RT – PCR test once in 15 days & possess the negative test report.

Permitted exemptions for negative RT-PCR certificate are as follows :

(i) Constitutional functionaries and health care professionals.
(ii) Children below 2 years.
(iii) In dire emergency situation (death in the family, medical treatment etc.,) the passenger's swab shall be collected on arrival in Karnataka with necessary details like phone number, address etc., duly verifying from his ID card. On receipt of the RT-PCR test report, further action will be taken as per the State protocol.

(Jawaid Akhtar)
Additional Chief Secretary to Govt.,
Department of Health and Family Welfare

**To:**

1. Chief Executives of all Airlines.
2. The Managing Director, BIAL, to coordinate the activity
3. The APHO, Bengaluru International Airport & Mangalore Airport.
4. The Manager, Airport Authority of India, Hubballi, Bealgavi, Kalaburagi & Mysore.
5. The Special Commissioner – Health, BBMP, Bengaluru
6. The Deputy Commissioners of all districts
7. CEO, ZP of all districts
8. The District Health and Family Welfare officers of all districts
9. The District Surveillance Officers of all districts

**Copy for kind information to:**

1. Chief Secretary, GoK
2. Additional Chief Secretary to Hon'ble Chief Minister
3. Additional Chief Secretary, Home Department
4. The Chief Commissioner – BBMP, Bengaluru
5. The Commissioner, Health & F W Services, Bengaluru
6. Mission Director-National Health Mission
7. Smt. Shikha, IAS, Managing Director , BMTC, Bengaluru, Coordinator, Domestic & International Returnees, BIAL, Bengaluru.
8. The Director, Health & Family Welfare Services
9. PS to Hon'ble Minister for HFW and Medical Education.